ನರೇಗಾದಲ್ಲಿ ಕೂಲಿಕಾರರಿಗೆ ವಂಚನೆ: ದೂರು

ನರೇಗಾ ಕಾಮಗಾರಿಗೆ ಜೆಸಿಬಿ ಬಳಕೆ: ತಮಟೆ ಸಂಸ್ಥೆ ದೂರು | ಕಾಮಗಾರಿ ತನಿಖೆ ನಡೆಸುವ ಭರವಸೆ ನೀಡಿದ ಜಿಪಂ ಸಿಇಒ ಪ್ರಭು

• **ಕನ್ನಡಪ್ರಭ ವಾರ್ತೆ** ಪಾವಗಡ

ನರೇಗಾ ಕಾಮಗಾರಿಯ ನಿಯಮ ಉಲ್ಲಂಘಿಸಿ, ಜೆಸಿಬಿಗಳಿಂದ ಕಾಮಗಾರಿ ನಿರ್ವಹಿಸುವ ಕಾರಣ ಗ್ರಾಮೀಣ ಕೂಲಿಕಾರರಿಗೆ ವಂಚನೆ ಆಗುತ್ತಿದೆ. ರೈತರ ಜಮೀನು ಪ್ರಗತಿ ಕಾಣಬೇಕು, ಬಡ ಕೂಲಿಕಾರರಿಗೆ ಕೆಲಸ ಸಿಗಬೇಕು. ಇವ್ಯಾವು ಸಾಧ್ಯವಾಗುತ್ತಿಲ್ಲ. ಗ್ರಾಪಂ ವ್ಯಾಪ್ತಿಯಲ್ಲಿ ನರೇಗಾ ಪ್ರಗತಿ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಿ ತಾಲೂಕು ತಮಟೆ ಸಂಸ್ಥೆಯ ಪದಾಧಿಕಾರಿಗಳು ಜಿಪಂ ಸಿಇಒ ಜಿ.ಪ್ರಭು ಅವರಿಗೆ ಮನವಿ ಪತ್ರ ಸಲ್ಲಿಸಿದರು.

ತುಮಕೂರು ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್ ಹಾಗೂ ಜಿಪಂ ಸಿಇಒ ಜಿ.ಪ್ರಭು ಮಂಗಳವಾರ ಪಾವಗಡಕ್ಕೆ ಭೇಟಿ ನೀಡಿ ತಾಪಂನಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಸಭೆ ನಡೆಸಿದರು. ಇದಕ್ಕೂ ಮುನ್ನ ತಾಲೂಕು ಪಂಚಾಯಿತಿ ಬಳಿ ನರೇಗಾ ಯೋಜನೆಯಲ್ಲಿ ಕೂಲಿಕಾರರ ನಿರ್ಲಕ್ಷ್ಯ ಹಾಗೂ ನಿಯಮ ಉಲ್ಲಂಘಿಸಿ ಜೆಸಿಬಿಗಳ ಮೂಲಕ ಕೆಲಸ ಸೇರಿದಂತೆ ಇತರೆ ಪ್ರಗತಿ ಕಾಮಗಾರಿಗಳ ಬಿಲ್ಲು ತಡೆ ಕುರಿತು ಇಲ್ಲಿನ ತಮಟೆ ಸಂಸ್ಥೆ ಪದಾಧಿಕಾರಿಗಳು ಜಿಪಂ ಸಿಇಒ ಗಮನ ಸೆಳೆದರು.

ಸಮಸ್ಯೆ ಆಲಿಸಿದ ಜಿಪಂ ಸಿಇಒ ಜಿ.ಪ್ರಭು, ಗ್ರಾಮೀಣ ಕೂಲಿಕಾರರ ಜೀವನ ಸುಧಾರಣೆ ಹಾಗೂ ರೈತಾಪಿಗಳ ಜಮೀನುಗಳ ಪ್ರಗತಿಗೆ ರಾಷ್ಟ್ರೀಯ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆ (ನರೇಗಾ)ಒಂದು ಅತ್ಯುತ್ತಮ ಯೋಜನೆ. ಈ ಯೋಜನೆ ಸಮಗ್ರ ಅನುಷ್ಠಾನದ ಜವಾಬ್ದಾರಿ ಗ್ರಾಪಂಗೆ ವಹಿಸಿದ್ದು ಜೆಸಿಬಿಗಳ ಬಳಕೆ ಮತ್ತು ಕೂಲಿಕಾರರಿಗೆ ವಂಚನೆ ಇತರೆ ಸಮಸ್ಯೆಗಳ ಕುರಿತು ಕೂಡಲೇ ಸಂಬಂಧಪಟ್ಟ ತಾಪಂ ಇಒ ಮತ್ತು ಗ್ರಾಪಂ ಅಧಿಕಾರಿಗಳಿಂದ ಯೋಜನೆಯ ಪ್ರಗತಿಯ ಸಮಗ್ರ ಮಾಹಿತಿ ಪಡೆಯಲಿದ್ದೇನೆ. ನಿಯಮ ಉಲ್ಲಂಘಿಸಿ ಕೆಲಸ ಮಾಡಿದ್ದರೆ ಕಾನೂನು ರೀತ್ಯಾ ಕ್ರಮಕ್ಕೆ ಮುಂದಾಗುವುದಾಗಿ ತಿಳಿಸಿದರು.

ಇದಕ್ಕೂ ಮುನ್ನ ತಮಟೆ ಸಂಸ್ಥೆಯ ಕಾರ್ಯ ನಿರ್ವಾಹಕ ಮುಖಂಡ ರಾಮಕೃಷ್ಣ ಮಾತನಾಡಿ, ತಮಟೆ ಸಂಸ್ಥೆ ಸಮುದಾಯ ಆಧಾರಿತ ಸ್ವಯಂ ಸೇವಾ ಸಂಸ್ಥೆಯಾಗಿ ಕೆಲಸ ನಿರ್ವಹಿಸುತ್ತಿದೆ. ತಾಲೂಕಿನ 15ಕ್ಕೂ ಹೆಚ್ಚು ಗ್ರಾಪಂಗಳಲ್ಲಿ ನರೇಗಾ ಅನುಷ್ಠಾನದ ಬಗ್ಗೆ ಜಾಗೃತಿ ಮೂಡಿಸಲಾಗಿದೆ. ನರೇಗಾ ಅಡಿ ತರಬೇತಿ ನೀಡಿ ಸಾವಿರಾರು ಕೂಲಿಕಾರರಿಗೆ ಗ್ರಾಪಂನಿಂದ ಜಾಬ್‌ಕಾರ್ಡ್ ಕಲ್ಪಿಸಲಾಗಿದೆ. ಈಗಾಗಲೇ ನರೇಗಾ ಯೋಜನೆ ಅಡಿ ಪ್ರಸಕ್ತ ಸಾಲಿಗೆ ಕೂಲಿ ಮತ್ತು ಕ್ರಿಯಾ ಯೋಜನೆಗೆ ಸೇರಿಸಲು 267 ಕಾಮಗಾರಿಗಳ ನಿರ್ವಹಣೆಗೆ ಅರ್ಜಿ ಸಲ್ಲಿಸಲಾಗಿದೆ. ಯೋಜನೆ ಅಡಿಯಲ್ಲಿ ಸೂಕ್ತ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿದರು.

ಅರಸೀಕೆರೆ, ಮರಿದಾಸನಹಳ್ಳಿ, ನ್ಯಾಯದಗುಂಟೆ, ವೆಂಕಟಾಪುರ, ವೈ.ಎನ್.ಹೊಸಕೋಟೆ, ಸಿದ್ದಾಪುರ, ಸಿ.ಕೆ.ಪುರ ಗ್ರಾಪಂ ಸೇರಿದಂತೆ ತಾಲೂಕಿನಾದ್ಯಂತ ನರೇಗಾ ಯೋಜನೆ ಅಡಿ ವ್ಯಾಪಕ ಭ್ರಷ್ಟಾಚಾರ ನಡೆದಿರುವುದಾಗಿ ಆರೋಪಿಸಿ, ಕೂಡಲೇ ತನಿಖೆಗೆ ಒಳಪಡಿಸಿ, ತಪ್ಪಿಸ್ಥರ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಸಿಇಒ ಅವರಲ್ಲಿ ತಮಟೆ ಸಂಸ್ಥೆಯ ಸಂಚಾಲಕ ಕೆ.ವೆಂಕಟೇಶ್ ಮನವಿ ಮಾಡಿದರು.

ಈ ಸಂದರ್ಭದಲ್ಲಿ ತಾಲೂಕು ತಮಟೆ ಸಂಸ್ಥೆಯ ಲತಾ, ಮಮತ, ಕಲಾ, ಮುದ್ದಮ್ಮ, ರಂಗಮ್ಮ, ತಿಮ್ಮಕ್ಕ, ಜಯಮ್ಮ, ಚಂದ್ರಕಲಾ, ಕೂಲಿಕಾರರು ಸೇರಿದಂತೆ ಇತರರು ಇದ್ದರು.

ನರೇಗಾದಲ್ಲಿ ಕೂಲಿಕಾರರಿಗೆ ನಿಯಮಾನುಸಾರ ಕೆಲಸ ಕೊಡುವಂತೆ ಒತ್ತಾಯಿಸಿ ತಮಟೆ ಸಂಸ್ಥೆಯಿಂದ ಜಿಪಂ ಸಿಇಒ ಜಿ.ಪ್ರಭುರವರಿಗೆ ಮನವಿ ಸಲ್ಲಿಸಲಾಯಿತು.

ಪಾವಗಡ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆವಹಿಸಿ ಜಿಲ್ಲಾಧಿಕಾರಿ ಶ್ರೀನಿವಾಸ್ ಮಾತನಾಡಿದರು. ಸಿಇಒ ಪ್ರಭು ಇದ್ದರು.

ಗ್ರಾಪಂ ವ್ಯಾಪ್ತಿಯಲ್ಲಿ ನರೇಗಾ ಕೂಲಿಕಾರರಿಗೆ ಕೂಡಲೇ ಆರೋಗ್ಯ ತಪಾಸಣೆ, ಕೂಲಿಕಾರರಿಗೆ ಕೆಲಸ, ಜೆಸಿಬಿಗಳಿಂದ ಕೆಲಸ ನಿರ್ವಹಣೆಗೆ ತಡೆ ನೀಡಬೇಕು. ಕಳೆದ ಸಾಲಿಗೆ ನಿರ್ವಹಿಸಿದ್ದ ಬಚ್ಚಲು ಮತ್ತು ಇಂಗುಗುಂಡಿ ದನದ ಕೊಟ್ಟಿಗೆಗೆ ಸಂಬಂಧಿಸಿದ ನರೇಗಾ ಯೋಜನೆಯ ಹಣ ಬಿಡುಗಡೆ ಆಗಿಲ್ಲ. ಇದನ್ನು ಪರಿಶೀಲಿಸಿ ಕೂಲಿಕಾರರಿಗೆ ನ್ಯಾಯ ಕಲ್ಪಿಸಬೇಕು.

• **ಕೆ.ವೆಂಕಟೇಶ್**
ತಮಟೆ ಸಂಸ್ಥೆಯ ಸಂಚಾಲಕ

ಸುದ್ದಿ ಸಿಂಚನ

ಆರೋಗ್ಯ ಕಡೆ ನಿರ್ಲಕ್ಷ್ಯ ಬೇಡ: ಕೃಷ್ಣಮೂರ್ತಿ

ಗುಬ್ಬಿ: ಗ್ರಾಮೀಣ ಭಾಗದ ಜನರಿಗೆ ಹಾಗೂ ನರೇಗಾ ಕೂಲಿ ಕಾರ್ಮಿಕರಿಗೆ ಉಚಿತವಾಗಿ ಆರೋಗ್ಯ ತಪಾಸಣೆ ಮಾಡಲಾಗುತ್ತಿದ್ದು, ಎಲ್ಲರೂ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಿ ಎಂದು ಪಿಡಿಒ ಕೃಷ್ಣಮೂರ್ತಿ ತಿಳಿಸಿದರು. ತಾಲೂಕಿನ ಎಂ.ಎನ್.ಕೋಟೆ ಗ್ರಾಮ ಪಂಚಾಯಿತಿಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಆರೋಗ್ಯ ಅಮೃತ ಅಭಿಯಾನದಡಿ ನರೇಗಾ ಕೂಲಿ ಕಾರ್ಮಿಕರಿಗೆ ಉಚಿತ ಆರೋಗ್ಯ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಬಡವರು ಆರೋಗ್ಯದ ಕಡೆ ನಿರ್ಲಕ್ಷ್ಯ ತೋರದೆ ಶಿಬಿರದಲ್ಲಿ ಪಾಲ್ಗೊಂಡು ತಜ್ಞ ವೈದ್ಯರಿಂದ ಪರೀಕ್ಷಿಸಿಕೊಳ್ಳಬೇಕು. ಹೆಚ್ಚಿನ ಚಿಕಿತ್ಸೆ ಇರುವ ರೋಗಿಗಳಿಗೆ ತಾಲೂಕು ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಶಿಬಿರದಲ್ಲಿ ಬಿಪಿ ಶುಗರ್, ಮೇಧು ಮೇಹ, ರಕ್ತದೊತ್ತಡ ಮುಂತಾದ ಎಲ್ಲ ರೀತಿಯ ಚಿಕಿತ್ಸೆಯನ್ನು ನೀಡಲಾಗುತ್ತದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಭವ್ಯ ನಟರಾಜು, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಶಶಿಕಲಾ ಯೋಗೀಶ್, ಉಪಾಧ್ಯಕ್ಷ ದಿಲೀಪ್ ಕುಮಾರ್, ಸದಸ್ಯರಾದ ರವೀಶ್, ಶೈಲಜಾ, ತಾಲೂಕು ಸಂಯೋಜಕ ರಾಘವೇಂದ್ರ, ತಿಪ್ಪೇಸ್ವಾಮಿ, ವೈದ್ಯಾಧಿಕಾರಿ ಸವಿತಾ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಚಿಕ್ಕನಾಯಕನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಸಿ.ಡಿ.ಚಂದ್ರಶೇಖರ್ ಆಯ್ಕೆಯಾಗಿದ್ದಾರೆ. ಈ ಹಿಂದೆ ಪುರಸಭೆ ಅಧ್ಯಕ್ಷರಾಗಿ, ಹಲವು ಸಂಘ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ್ದ ಚಂದ್ರಶೇಖರ್, ಹಲವು ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯ ಕಾರ್ಯಕರ್ತನಾಗಿ ಸೇವೆ ಸಲ್ಲಿಸಿದ್ದರು. ಇವರ ಪಕ್ಷ ನಿಷ್ಠೆ ಗುರ್ತಿಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ.

‘ನಿಗದಿತ ಅವಧಿಯೊಳಗೆ ಕಾಮಗಾರಿ ಪೂರೈಸಿ’

ಪಾವಗಡ ತಾಪಂನಲ್ಲಿ ಅಧಿಕಾರಿಗಳ ಸಭೆ ನಡೆಸಿ ಸೂಚನೆ ನೀಡಿದ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್

ತುಮಕೂರು: ಕೆಎಸ್‌ಪಿಡಿಸಿಎಲ್ ಪಾವಗಡ ಸೋಲಾರ್ ಪಾರ್ಕ್ ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಅವಧಿಯೊಳಗೆ ಪೂರ್ಣಗೊಳಿಸಬೇಕೆಂದು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕೆ. ಶ್ರೀನಿವಾಸ್ ಸೂಚಿಸಿದರು.

ಪಾವಗಡ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಮಂಗವಾರ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಕೆಎಸ್‌ಪಿಡಿಸಿಎಲ್‌ನ ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದರಲ್ಲದೆ ಯಾವ ಕಾಮಗಾರಿಗಳು ಇನ್ನೂ ಪೂರ್ಣಗೊಂಡಿಲ್ಲವೂ ಆ ಕಾಮಗಾರಿಗಳನ್ನು ಶೀಘ್ರವಾಗಿ ಮುಗಿಸಬೇಕು ಎಂದು ತಿಳಿಸಿದರು.

ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿಯಡಿಯಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳನ್ನು ಮೂರನೇ ವ್ಯಕ್ತಿಯು ಪರಿಶೀಲನೆ ನಡೆಸಿ ವರದಿ ನೀಡಿ. ತಾಲೂಕು ಮಟ್ಟದ ವಿವಿಧ ಇಲಾಖೆಗಳ ಪ್ರಗತಿಯನ್ನು ಪರಿಶೀಲಿಸಿದ ಅವರು, ಯಾವ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ಸಮಸ್ಯೆಗಳು ಇದ್ದಲ್ಲಿ ಕೂಡಲೇ ಸರಿಪಡಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕಿನಲ್ಲಿ ಒಂದೇ ಒಂದು ಶವಾಗಾರ ಕೇಂದ್ರ ಇರುವುದರಿಂದ ದೂರದ ಹಳ್ಳಿಗಳಿಂದ ಮೃತ ದೇಹಗಳನ್ನು ಸಾಗಿಸಲು ಕಷ್ಟ ಆಗುತ್ತಿದೆ ಎಂದು ಪೊಲೀಸ್ ಇಲಾಖೆಯ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ತಾಲೂಕಿನಲ್ಲಿ ಮತ್ತೊಂದು ಶವಾಗಾರ ಕೇಂದ್ರವನ್ನು ಕೋಟಗುಡ್ಡದಲ್ಲಿ ಸ್ಥಾಪಿಸುವುದಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಟಿಎಚ್‌ಒ ಅವರಿಗೆ ಸೂಚಿಸಿದರು. ರಾಜ್ಯ ಸರ್ಕಾರದ 5 ಗ್ಯಾರಂಟಿಗಳಲ್ಲಿ ಒಂದಾದ ಗೃಹ ಜ್ಯೋತಿ ಯೋಜನೆಯಡಿಯಲ್ಲಿ ಜುಲೈ 3ರವರೆಗೆ ತಾಲೂಕಿನ 25,508 ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದಾರೆ ಎಂದು ಬೆಸ್ಕಾಂ ಇಲಾಖೆಯ ಅಧಿಕಾರಿ ಸಭೆಗೆ ಮಾಹಿತಿ ನೀಡಿದರು.

ಶಕ್ತಿ ಯೋಜನೆಯಡಿಯಲ್ಲಿ ತಾಲೂಕಿನಲ್ಲಿ ಮಹಿಳೆಯರ ಪ್ರಯಾಣ ಹೆಚ್ಚಾಗಿರುವುದರಿಂದ ಪ್ರತಿ ದಿನ 1.5 ಲಕ್ಷ ಆದಾಯ ನಿಗಮಕ್ಕೆ ಬರುತ್ತಿದೆ ಎಂದು ಡಿಪೋ ಮ್ಯಾನೇಜರ್ ಹೇಳಿದರು.

ತಾಲೂಕಿನಲ್ಲಿ 3 ಎಕರೆಗಿಂತ ಹೆಚ್ಚಿನ ಕೃಷಿ ಭೂಮಿಯನ್ನು, ನಾಲ್ಕು ಚಕ್ರದ ವಾಹನ, 30★40 ವಿಸ್ತೀರ್ಣದ ಜಾಗವನ್ನು ಹೊಂದಿರುವ ಕುಟುಂಬಗಳನ್ನು ಗುರುತಿಸಿ ಇನ್ನು 15 ದಿನಗಳೊಳಗಾಗಿ ಬಿಪಿಎಲ್ ಪಡಿತರಚೀಟಿಯನ್ನು ವಿತರಿಸಬೇಕೆಂದು ಆಹಾರ ಇಲಾಖೆಯ ಶಿರಸ್ತೇದಾರ್ ಅವರಿಗೆ ಸೂಚಿಸಿದರು. ಸಭೆಯಲ್ಲಿ ತಹಸೀಲ್ದಾರ್ ಸುಜಾತ, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಶಿವರಾಜಯ್ಯ, ಕೆಎಸ್‌ಪಿಡಿಸಿಎಲ್‌ನ ಸಿಇಒ ಅಮರನಾಥ್, ಡಿಎಚ್‌ಒ. ಡಾ. ಮಂಜುನಾಥ್, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ಸುರೇಶ್ ರೆಡ್ಡಿ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಸರ್ಕಾರದ ಯೋಜನೆಗಳ ಸಮರ್ಪಕ ಅನುಷ್ಠಾನ ಸೇರಿದಂತೆ ರೈತ ಮತ್ತು ಬಡವರ ಕೆಲಸದ ಬಗ್ಗೆ ಹೆಚ್ಚು ಆಸಕ್ತಿವಹಿಸಿ ಕೆಲಸ ಮಾಡಬೇಕು. ಸರ್ಕಾರದ ಯೋಜನೆಗಳು ಜನತೆಗೆ ತಲುಪಬೇಕು. ಯೋಜನೆಗಳ ಅನುಷ್ಠಾನದಲ್ಲಿ ಅಧಿಕಾರಿಗಳು ಆಸಕ್ತಿವಹಿಸಿ ಕೆಲಸ ಮಾಡಿ.

• **ಜಿ.ಪ್ರಭು** ಜಿಪಂ ಸಿಇಒ

‘ಕನಸು ನನಸಾಗಲು ಶ್ರಮಪಡಿ’

ಭವ್ಯ ಭಾರತದ ಸತ್ಪ್ರಜೆ ರೂಪಿಸಲು ಪೂರಕವಾದ ಶಿಕ್ಷಣ ನೀಡಿ: ಚಂದ್ರೇಶ್

ತುರುವೇಕೆರೆಯ ಜಿಜೆಸಿ ಕಾಲೇಜಿನಲ್ಲಿ ಸ್ನೇಹಸಮ್ಮಿಲದ ಟ್ರಸ್ಟ್ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

• **ಕನ್ನಡಪ್ರಭ ವಾರ್ತೆ** ತುರುವೇಕೆರೆ

ಎಂಜಿನಿಯರ್, ಡಾಕ್ಟರ್ ಆಗುವ ಕನಸನ್ನು ಮಾತ್ರ ಕಾಣಬೇಡಿ. ಐಎಎಸ್, ಐಪಿಎಸ್ ಮಾಡುವ ಕನಸು ಕಾಣಿ ಅಲ್ಲದೇ ದೇಶದ ಬೆನ್ನೆಲುಬಾಗಿರುವ ಮಿಲಿಟರಿಯಲ್ಲಿ ಅತ್ಯುನ್ನತ ಹೊಂದುವ ಆಶೋತ್ತರವನ್ನೂ ಸಹ ಮೈಗೂಡಿಸಿಕೊಳ್ಳಿ. ಅದನ್ನು ನನಸು ಮಾಡಲು ಶ್ರಮಪಟ್ಟು ಸಾಧನೆ ಮಾಡಿ ಎಂದು ಸ್ನೇಹ ಮಿಲನ ಟ್ರಸ್ಟ್‌ನ ಅಧ್ಯಕ್ಷ ದೊಡ್ಡಾಘಟ್ಟ ಚಂದ್ರೇಶ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಸ್ನೇಹ ಸಮ್ಮಿಲನ ಟ್ರಸ್ಟ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು ಇಂದಿಗೂ ನಮ್ಮ ಭಾರತೀಯ ಸನಾತನ ಪರಂಪರೆ ಜೀವಂತವಾಗಿದೆ. ಇದನ್ನು ಸಾಕ್ಷೀಕರಿಸುವ ನಿಟ್ಟಿನಲ್ಲಿ ನಮ್ಮ ದೇಶದಲ್ಲಿ ಜ್ಞಾನಿಗಳು, ನೇತಾರರು ಜನ್ಮ ತಾಳುತ್ತಿರುವುದು ಹೆಮ್ಮೆಯ ಸಂಗತಿ. ಈ ಶಾಲೆಯಲ್ಲಿ ಹಿರಿಯ ವಿದ್ಯಾರ್ಥಿಗಳು ಸೇರಿ ಸ್ನೇಹ ಸಮ್ಮಿಲನ ಟ್ರಸ್ಟ್ ಸ್ಥಾಪಿಸಿ ಇಲ್ಲಿನ ಬಡ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಪೂರಕವಾಗಿ ನೆರವು ನೀಡುತ್ತಿರುವುದು ನಮಗೆ ತೃಪ್ತಿ ತಂದಿದೆ. ಭವ್ಯ ಭಾರತದ ಸತ್ಪ್ರಜೆಗಳನ್ನು ರೂಪಿಸಲು ಪೂರಕವಾದ ಶಿಕ್ಷಣಕ್ಕೆ ಆದ್ಯತೆ ನೀಡಬೇಕಾಗಿದೆ ಎಂದು ಚಂದ್ರೇಶ್ ಹೇಳಿದರು.

ಕಾಲೇಜಿನ ಹಿರಿಯ ಉಪನ್ಯಾಸಕ ವಿ.ಎನ್.ನಂಜೇಗೌಡ ಮಾತನಾಡಿ, ಈ ಶಾಲೆಯಲ್ಲಿ ಓದು ಮುಗಿಸಿ ಬದುಕನ್ನರಿಸಿ ಬೇರೆಡೆಗೆ ತೆರಳಿದ್ದರೂ ವರ್ಷಕ್ಕೊಮ್ಮೆ ಈ ಶಾಲೆಗೆ ಬಂದು ಇಲ್ಲಿನ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವು ನೀಡುತ್ತಿರುವುದು ಅನುಕರಣೀಯ. ವಿದ್ಯಾರ್ಥಿಗಳು ತಮ್ಮ ಗುರಿ ಸಾಧಿಸುವತ್ತ ಗಮನವನ್ನು ಹರಿಸಬೇಕು. ದಿನ ಗುರಿ ತಲುಪಿದ ಮೇಲೆ ಸಮಾಜದ ಇತರರ ಸಂಕಷ್ಟಗಳಿಗೆ ಸ್ಪಂದಿಸುವ ಗುಣಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಕಾಲೇಜಿನ 27 ವಿದ್ಯಾರ್ಥಿಗಳಿಗೆ ಸ್ನೇಹ ಸಮ್ಮಿಲನ ಟ್ರಸ್ಟ್ ವತಿಯಿಂದ ಪುಸ್ತಕಗಳು, ನೋಟ್ ಬುಕ್ ಹಾಗೂ ಧನ ಸಹಾಯವನ್ನು ನೀಡಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ಈ ವೇಳೆ ಸ್ನೇಹ ಸಮ್ಮಿಲನ ಟ್ರಸ್ಟ್ ಕಾರ್ಯದರ್ಶಿ ಪ್ರಸನ್ನಕುಮಾರ್, ಖಜಾಂಚಿ ಯೋಗಾನಂದ್, ಉಮೇಶ್, ಶಶಿಧರ್ ಸೇರಿದಂತೆ ಕಾಲೇಜಿನ ಉಪನ್ಯಾಸಕ ವರ್ಗ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಕೆನರು ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)

ಹೆಚ್.ಒ.ಬೆಂಗಳೂರು
ತುಮಕೂರು ಮೈನ್ ಶಾಖೆ
ಅಶೋಕ ರಸ್ತೆ, ಸಿವಿಲ್ ಬಸ್ ಸ್ಟ್ಯಾಂಡ್ ಹತ್ತಿರ, ಬಿಎಸ್‌ಎನ್‌ಎಲ್ ಬಿಲ್ಡಿಂಗ್, ತುಮಕೂರು-572101
ದೂ.ಸಂ. 0816-2252331, ಮೊ: 9483530522
ಇ-ಮೇಲ್: cb0522@canarabank.com

[ಸೆಕ್ಷನ್ 13(2)]ಸಾಲಗಾರರಿಗೆ/ ಜಾಮೀನುದಾರರಿಗೆ/ ಅಡಮಾನುದಾರರಿಗೆ ತಗಾದೆ ಸೂಚನೆ

ಸೆಕ್ಯೂರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೆಕ್ಷನ್ 13(2)ರನ್ವಯ ಒದಿಕೊಂಡಂತೆ ನೋಟೀಸು

ಕೆನರಾ ಬ್ಯಾಂಕ್, ತುಮಕೂರು ಮೈನ್ ಶಾಖೆ ಆದ ನಾವು ಕೆಳಕಂಡ ನಿಮಗೆ ಸೆಕ್ಯೂರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೆಕ್ಷನ್ 13(2)ರ ಅನ್ವಯ ಡಿಮ್ಯಾಂಡ್ ನೋಟೀಸ್‌ನ ನೀಡಿಕೆಯನ್ನು ತಪ್ಪಿಸಿಕೊಂಡಿರುವುದರಿಂದ, ಬ್ಯಾಂಕ್ ಡಿಮ್ಯಾಂಡ್ ನೋಟೀಸ್‌ಗಳನ್ನು ನಿಮ್ಮ ಸಂಬಂಧಪಟ್ಟ ವಿಳಾಸಗಳಿಗೆ ನೋಂದಾಯಿತ ಅಂಚೆ ಎ.ಡಿ. ಮೂಲಕ ಕೆಳಗೆ ತಿಳಿಸಿರುವ ದಿನಾಂಕದಂದು ಸ್ವೀಕೃತಿ ಕಳುಹಿಸಲಾಗಿತ್ತು, ಆದರೆ ಇವುಗಳು ನಿಮಗೆ ನೀಡಿಕೆಯಾಗದೆ ಹಿಂದಕ್ಕೆ ಬಂದಿವೆ. ನಿಮಗೆ ಮಂಜೂರು ಮಾಡಿದ್ದ ಸಾಲಗಳನ್ನು ಮರುಪಾವತಿ ಮಾಡಲು ತಪ್ಪಿತಸ್ಥರಾಗಿರುವುದು ಸದರಿ ನೋಟೀಸುಗಳ ಒಕ್ಕಣೆಯಾಗಿರುವುದು. ಸಾಲದ ವಿವರಗಳು ಮತ್ತು ಬಾಕಿಯಿರುವ ಮೊತ್ತ ಕೆಳಕಂಡಂತಿರುವುದು.

1. ಸಾಲಗಾರರ / ಸಹ ಸಾಲಗಾರರ / ಅಡಮಾನದಾರರ / ಜಾಮೀನುದಾರರ ಹೆಸರು ಮತ್ತು ವಿಳಾಸ : (1) ಬಿ.ಎಸ್. ಮಹೇಶ್ ಬಿನ್ ಬಿ.ಸಿ. ಶಂಕರಪ್ಪ, ಭಾಗ್ಯಶ್ರೀ, ಖಾತಾ ನಂ. 237, 12ನೇ ಕ್ರಾಸ್, ಗಂಗೋತ್ರಿನಗರ ಎಕ್ಸ್‌ಟೆನ್ಷನ್, ತುಮಕೂರು.

[ಸಾಲಗಾರರು ಪಡೆದ ಸಾಲ ಸೌಲಭ್ಯಗಳ ವಿವರಗಳು]

ಕ್ರ ಸಂ	ಖಾತೆಯ ಸಂಖ್ಯೆ ಸಾಲ/ಮಿತಿಯ ಸ್ವರೂಪ	ಮಂಜೂರಾತಿ ದಿನಾಂಕ	ಸಾಲದ ಮಿತಿ ರೂ.	ಬರಬೇಕಾದ ಬಾಕಿ ಮೊತ್ತ ರೂ.	ಬಡ್ಡಿ ದರ
1	0522619005129 Housing Loan	17.04.2001	Rs. 6.00 lakhs	Rs.17,09,108.66	13.95%

ಬರಬೇಕಾದ ಒಟ್ಟು ಮೊತ್ತ : ರೂ. 17,09,108.66 (ರೂಪಾಯಿ ಹದಿನೇಳು ಲಕ್ಷದ ಒಂಭತ್ತು ಸಾವಿರದ ಒಂದುನೂರ ಎಂಟು ಮತ್ತು ಅರವತ್ತಾರು ಪೈಸೆ ಮಾತ್ರ) ಜೊತೆಗೆ ದಿನಾಂಕ 07.06.2023 ರಿಂದ ಬಡ್ಡಿ ಹಾಗೂ ಇತರೆ ಖರ್ಚು, ವೆಚ್ಚಗಳು.

ಎನ್‌ಪಿಎ ದಿನಾಂಕ : 31.12.2011 ಡಿಮ್ಯಾಂಡ್ ನೋಟಿಸ್ ದಿನಾಂಕ : 08.06.2023

ಸ್ವತ್ತಿನ ಹಕ್ಕುದಾರರು : ಬಿ.ಎಸ್.ಮಹೇಶ್.

ಸ್ವತ್ತಿನ ವಿವರ: ವಾಸಯೋಗ್ಯ ಭೂಮಿ ಮತ್ತು ಕಟ್ಟಡವು ನಿವೇಶನ ನಂ. 5, ಸರ್ವೆ ನಂ. 45/1, 6, 7 & 8, ಬಟವಾಡಿ ಗ್ರಾಮ, 12ನೇ ಕ್ರಾಸ್, ಗಂಗೋತ್ರಿನಗರ ಎಕ್ಸ್‌ಟೆನ್ಷನ್, ತುಮಕೂರು ಸಿಟಿಯಲ್ಲಿದ್ದು, ಮುನಿಸಿಪಲ್ ಖಾತಾ ನಂ. 237, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 35 ಅಡಿ, ಉತ್ತರದಿಂದ ದಕ್ಷಿಣಕ್ಕೆ 47'6" ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.4 ರಲ್ಲಿ ನಿರ್ಮಿಸಲಾಗಿರುವ ಮನೆ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ.10 ರಲ್ಲಿ ನಿರ್ಮಿಸಲಾಗಿರುವ ಮನೆ, ದಕ್ಷಿಣಕ್ಕೆ: ರಸ್ತೆ.

ಸದರಿ ನೋಟೀಸ್ ಪ್ರಕಟವಾದ ದಿನಾಂಕದಿಂದ 60 ದಿನಗಳ ಒಳಗೆ ಮೇಲೆ ತಿಳಿಸಿರುವ ಸಂಬಂಧಪಟ್ಟ ಮೊತ್ತಗಳನ್ನು ಕೆನರಾ ಬ್ಯಾಂಕ್‌ಗೆ ಪಾವತಿ ಮಾಡುವಂತೆ ಮತ್ತು ಇದಕ್ಕೆ ತಪ್ಪಿದ್ದಲ್ಲಿ ಸಾಲಗಾರರು ಮತ್ತು ಆಧಾರದಾರರ ಭದ್ರತಾ ಸ್ವತ್ತುಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು ಸೇರಿದಂತೆ, ಸದರಿ ಅಧಿನಿಯಮದ ಉಪಬಂಧಗಳ ಅನ್ವಯ ಭದ್ರತಾಸ್ವತ್ತುಗಳ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ನಿಮಗೆ ಈ ಮೂಲಕ ಕರೆ ನೀಡಲಾಗಿದೆ. ಅಧಿನಿಯಮದ ಅನ್ವಯ ಕೆನರಾ ಬ್ಯಾಂಕಿಗೆ ದೊರೆಯುವ ಅಧಿಕಾರಗಳಲ್ಲಿ ಇವು ಒಳಗೊಂಡಿರುತ್ತವೆ. (1) ಗುತ್ತಿಗೆ, ನಿಯೋಜಿತ ಮಾರಾಟ ಮತ್ತು ಭದ್ರತೆಯುಳ್ಳ ಸ್ವತ್ತುಗಳನ್ನು ಪಡೆಯುವಿಕೆ ಮೂಲಕ ವರ್ಗಾವಣೆ ಹಕ್ಕುಗಳು ಸೇರಿದಂತೆ ಸಾಲಗಾರರು / ಆಧಾರದಾರರ ಭದ್ರತೆ ಕೆನರಾ ಬ್ಯಾಂಕ್. ಭದ್ರತೆಯುಳ್ಳ ಸ್ವತ್ತುಗಳ ವರ್ಗಾವಣೆಯ ಸಂಬಂಧದಲ್ಲಿ ಅಥವಾ ಅದರಲ್ಲಿ ವರ್ಗಾವಣೆ ಪಡೆದವರಿಗೆ ವರ್ಗಾವಣೆಯನ್ನು ನೀವೇ ಮಾಡಿರುವಿರಿ ಎಂಬ ಎಲ್ಲಾ ಹಕ್ಕುಗಳನ್ನು ಹೊಂದಿರುವರು. ಅಂಟಿಸಿರುವ ಡಿಮ್ಯಾಂಡ್ ನೋಟೀಸ್‌ನಲ್ಲಿ ತಿಳಿಸಿರುವ ಯಾವುದೇ ಭದ್ರತಾಸ್ವತ್ತುಗಳನ್ನು ಹಾಗೂ ಬ್ಯಾಂಕಿಗೆ ಈಡು ಮಾಡಿರುವ / ಆಧಾರ ಮಾಡಿರುವ ಸ್ವತ್ತುಗಳನ್ನು ಬ್ಯಾಂಕಿನ ಪೂರ್ವಾನುಮತಿ ಪಡೆಯದೆ ಮಾರಾಟ, ಗುತ್ತಿಗೆ ಅಥವಾ ಇನ್ನಿತರೆ ರೂಪದಲ್ಲಿ (ನಿಮ್ಮ ವ್ಯವಹಾರದ ಸಾಮಾನ್ಯ ವಿಧಾನದ ಹೊರತಾಗಿ ವರ್ಗಾವಣೆ ಮಾಡದಂತೆ ಸದರಿ ಅಧಿನಿಯಮದ ಪ್ರಕರಣ 13(13) ರ ಉಪಬಂಧಗಳ ಅನ್ವಯ ಈ ಮೂಲಕ ನಿಮ್ಮನ್ನು ನಿಷೇಧಿಸಿದೆ. ಸದರಿ ಅಧಿನಿಯಮದ ಪ್ರಕರಣ 13(2) ರ ಅನ್ವಯ ಈ ನೋಟೀಸನ್ನು ನೀಡಿದೆ.

ದಿನಾಂಕ: 04.07.2023
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ಕೆನರಾ ಬ್ಯಾಂಕ್

BAJAJ FINSERV

ಚಿನ್ನಾಭರಣಗಳ ಹರಾಜಿಗಾಗಿ ವಾರ್ತಾ ಪತ್ರಿಕೆಗಳಲ್ಲಿ ಸಾರ್ವಜನಿಕ ಸೂಚನೆ
ಬಜಾಜ್ ಫೈನಾನ್ಸ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಂಬೈ-ಪುಣೆ ರೋಡ್, ಆಕುರ್ದಿ, ಪುಣೆ-411035

ಎಲ್ಲ ಸಂಬಂಧಿತ ಸಾಲಗಾರರು ಮತ್ತು ಜನಸಾಮಾನ್ಯರಿಗೆ ಬಿಎಫ್ಎಲ್ ಈ ಮೂಲಕ ಸೂಚಿಸುವುದೇನೆಂದರೆ, ಸಾಲಗಾರರು ಸಾಲ ಪಡೆಯುವ ಸಮಯದಲ್ಲಿ ತಮ್ಮ ಸಾಲ ಖಾತೆಗಳಲ್ಲಿ ಅಡಮಾನವಾಗಿ ಚಿನ್ನದ ಆಭರಣ ಇಟ್ಟವರು ಮತ್ತು ಪದೇ-ಪದೇ ನೋಟಿಸ್‌ಗಳನ್ನು ನೀಡಿದರೂ ಸಾಲ ಮೊತ್ತದಲ್ಲಿ ವ್ಯತ್ಯಯವನ್ನು ಉಂಟು ಮಾಡಿದವರು ಅಥವಾ ಸೂಕ್ತ ಮಾರ್ಜಿನ್ ಅನ್ನು ಒದಗಿಸಲು ವಿಫಲವಾಗಿರುವವರ ಚಿನ್ನದ ಆಭರಣಗಳನ್ನು "ಹೇಗಿದೆಯೋ ಹಾಗೆ ಮತ್ತು ಏನಿದೆಯೋ ಅದನ್ನು ಆಧಾರದಲ್ಲಿ" ಹರಾಜು ಹಾಕಲಾಗುತ್ತದೆ. ಈ ಕೆಳಗಿನ ನಿಯಮಗಳಿಗೆ ಬಿಡ್ ಮಾಡುವವರು ಬದ್ಧವಾಗಿರುವಂತೆ ವಿನಂತಿಸಲಾಗಿದೆ:

(a) ಸಾರ್ವಜನಿಕ ನೋಟಿಸ್ ನ ಸಂಪೂರ್ಣ ವಿವರಗಳನ್ನು ಪಡೆಯಲು (ಸಾಲ, ಆಭರಣ, ಒಟ್ಟು ತೂಕ, ಹರಾಜಿನ ಸ್ಥಳ ಮತ್ತು ದಿನಾಂಕ) ಪಕ್ಕದಲ್ಲಿರುವ QR ಕೋಡ್ ಅನ್ನು ಸ್ಕ್ಯಾನ್ ಮಾಡಬಹುದು;
(b) ಈ ಸಾರ್ವಜನಿಕ ಹರಾಜಿಗೆ ಸಂಬಂಧಿಸಿದ ಸಂಪೂರ್ಣ ಬಿಡ್ಡರ್ ನಿಯಮಗಳು ಮತ್ತು ಷರತ್ತುಗಳನ್ನು ("ನಿಯಮಗಳು & ಷರತ್ತುಗಳು") ಓದಲು ಈ ವೆಬ್‌ಲಿಂಕ್ ಪ್ರವೇಶಿಸಿ https://cms-assets.bajajfinserv.in/is/content/bajajfinance/biddertcpdf?scl=1&fmt=pdf;
(c) ನಿಯಮಗಳು ಮತ್ತು ಷರತ್ತುಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಅದರ ನಂತರ ಹರಾಜು ದಿನಾಂಕದಂದು ಅಥವಾ ಅದಕ್ಕೂ ಮೊದಲು ಹಣ ವರ್ಗಾವಣೆ (ಎನ್‌ಇಎಫ್‌ಟಿ/ಆರ್‌ಟಿಜಿಎಸ್) ಮೂಲಕ ರೂ.25,000/- ಹಣವನ್ನು ಡೆಪಾಸಿಟ್ ಮಾಡಲು;
(d) ಬೆಳಗ್ಗೆ 10 ಗಂಟೆಯ ಸಮಯದಲ್ಲಿ ಹರಾಜು ಸಮಯದಲ್ಲಿ ಖುದ್ದಾಗಿ ಹಾಜರಾಗುವುದು; ಮತ್ತು
(e) ಹರಾಜು ಸ್ಥಳಕ್ಕೆ ತನ್ನ ಮಾನ್ಯ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಅನ್ನು ತೆಗೆದುಕೊಂಡು ಹೋಗಲು.

ನನ್ನನ್ನು ಸ್ಕ್ಯಾನ್ ಮಾಡಿ

ಹರಾಜು ಸ್ಥಳ ಮತ್ತು ದಿನಾಂಕದಲ್ಲಿ ಬದಲಾವಣೆಗಳು ಇದ್ದರೆ, ಹರಾಜು ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಬಿಡ್ ಅನ್ನು ನೀವು ಸಲ್ಲಿಸುವಿಕೆಯನ್ನು ಈ ಮೇಲಿನ ನಿಯಮಗಳಿಗೆ ನಿಮ್ಮ ಸಮ್ಮತಿ ಎಂದು ಭಾವಿಸಲಾಗುತ್ತದೆ. ಸಾರ್ವಜನಿಕ ಹರಾಜು ಮಾರಾಟದ ಅಮಾನತು/ರದ್ದತಿ ಇದ್ದಲ್ಲಿ, ಸಾಲಗಾರರ ಸಕ್ಷಮದಲ್ಲಿ ಬಿಎಫ್ಎಲ್ ಖಾಸಗಿ ಮಾರಾಟದ ಮೂಲಕ ಆಭರಣವನ್ನು ಮಾರಾಟ ಮಾಡುವ ಹಕ್ಕನ್ನೂ ಕಾಯ್ದಿರಿಸಿಕೊಳ್ಳಲಿದೆ. ಯಾವುದೇ ವಿಚಾರಣೆಗಳಿಗಾಗಿ, ನಮ್ಮನ್ನು ಈ ಇಮೇಲ್ ಐಡಿಯಲ್ಲಿ ಸಂಪರ್ಕಿಸಬಹುದು - gold.auction@bajajfinserv.in

(17-07-23): ಬೀದರ್; P5H5GOL4400530, 4521349, 4531748, 4549098, 4552157. ಬೀದರ್ ಜಿಎಲ್ P87QGOL4399017, 4420013, 4439037, 4492235, 4514967, 4528761, 4550574, 4549261, 4628334. ಚಾಮರಾಜ್‌ನಗರ್; PZ19GOL4564154, 4575017. ಕೆಂಗೇರಿ; PY16GOL4413327, 4530610. ಮೈಸೂರು ಸರಸ್ವತಿಪುರಂ; P15IGOL4520993. ಮೈಸೂರು; P508GOL4446890, 4458273, 4482401, 4531107, 4601063, 4605771. ನಿಪಾಣಿ; P5R1GOL4579924. (18-07-23): ಬೆಳಗಾವಿ P557GOL4483077. ಬೆಳಗಾವಿ P557GOL4483077, 4500199, 4509583, 4520270, 4533432, 4549162, 4581256, 4580913. ಗುಲ್‌ಬರ್ಗ; P4B0GOL4399686, 4430884, 4472970, 4480725, 4502476, 4523168, 4532954, 4570706, 4591949, 4597649. ಗುಲ್‌ಬರ್ಗ ಜಿಎಲ್; P12IGOL4465007, 4476057, 4523823, 4530371, 4534648, 4561271, 4566418, 4571919, 4597357, 4618310. ಕೊಪ್ಪ ಕೆಆರ್; P10PGOL4543517, 4597184. ಕೃಷ್ಣರಾಜನಗರ; P91KGOL4464883. ಮಹಾಲಿಂಗ ಪುರ; P12PGOL4399038, 4445507. ಸೇಡಮ್; PU70GOL4473054, 4512465. (19-07-23): ಬಿಜಾಪುರ; P4B1GOL4400634. ಬಿಜಾಪುರ; P4B1GOL4400634, 4400135, 4413262, 4421108, 4435808, 4500436, 4514126, 4543516, 4563861, 4587998, 4590423, 4618906. ಧಾರವಾಡ; P4T7GOL4400518, 4499409, 4562889, 4562681, 4563387, 4597025. ಗೋಕಾಕ; P4G5GOL4424398, 4428513, 4435826, 4449426, 4444909, 4512561, 4544754, 4596755, 4622756. ಹಾಸನ; P527GOL4455980, 4499374, 4524018, 4606163, 4629521. ಹುಬ್ಬಳ್ಳಿ; P540GOL4437770, 4463583, 4466227, 4483254, 4539909, 4549040, 4605710. ಕಾರವಾರ; P4V8GOL4399581, 4473250, 4483765, 4529988, 4539594, 4573910, 4589769, 4597535, 4599783, 4605791, 4618764, 4619175. ಸಾಗರ್ ಕೆಎ; PX27GOL4413249, 4429158, 4481081, 4583443. ಶಿವಮೊಗ್ಗ; P490GOL4413066, 4481675, 4540032, 4582647. (20-07-23): ಬಾಗಲಕೋಟೆ; P4G4GOL4508521. ಬಾಗಲಕೋಟೆ; P4G4GOL4508521, 4513868, 4581112. ಚಿಕ್ಕಬಳ್ಳಾಪುರ್; P5I1GOL4530788. ಚಿಕ್ಕಮಗಳೂರ್; P4K9GOL4472530, 4574672, 4580021. ದಾವಣಗೆರೆ; P4F5GOL4431119, 4574652. ದಾವಣಗೆರೆ ಜಿಎಲ್; P09IGOL4429419, 4581918, 4598889, 4632584. ದೊಡ್ಡಬಳ್ಳಾಪುರ P89SGOL4500097, 4523534, 4539077, 4551841. ಕೋಲಾರ; P5H6GOL4400956, 4431670, 4450454, 4447192, 4445689, 4488271, 4522764, 4548975, 4562017, 4566312, 4583739, 4613078. (21-07-23): ಬಳ್ಳಾರಿ; P590GOL4590684. ಚಿತ್ರದುರ್ಗ; P4F6GOL4509795, 4549204, 4598287, 4596475. ಹೊಸಪೇಟೆ; P591GOL4420074, 4481006, 4510007, 4531393. ಕಾರ್ಕಳ; P4V6GOL4589263. ಲಿಂಗಸುಗೂರು; PX46GOL4419959, 4438133, 4447477, 4463320, 4482743, 4490729, 4519996, 4531136, 4531447, 4540986, 4543242, 4552296, 4565044, 4600967, 4600010, 4623502. ಮಂಡ್ಯ; P4J2GOL4412676, 4437808, 4464862, 4471393, 4529544, 4541178, 4552971, 4563186, 4589063. ಪುತ್ತೂರ್; P4V5GOL4540040. (22-07-23): ಗದಗ; P6E6GOL4402507. ಗದಗ; P6E6GOL4402507, 4450777, 4510701, 4534819, 4543962, 4582031, 4588003, 4588705, 4599925, 4596949, 4622039. ಹರ್ಪನಹಳ್ಳಿ; PX14GOL4589366. ಹಾವೇರಿ; P5R5GOL4413434, 4420883, 4437644, 4587961, 4591370, 4631424. ರಾಯಚೂರು; P4F4GOL4463275, 4551591, 4571103, 4570891, 4630407. ರಾಣೇಬೆನ್ನೂರು; P5R6GOL4422885, 4584061. ತೀರ್ಥಹಳ್ಳಿ ಕೆಎ; P58MGOL4630664. ತುಮಕೂರು; P543GOL4423096, 4515751, 4583968.

ಬಜಾಜ್ ಫೈನಾನ್ಸ್ ಲಿಮಿಟೆಡ್

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
(ಒಂದು ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

ಇ-ಹರಾಜು ಸೂಚನೆ

2002ರ ಭದ್ರತಾ ಹಿತಾಸಕ್ತಿ ನಿಯಮಗಳ ಪ್ರಾವಿಸೋ ರೂಲ್ 8(6) ಮತ್ತು 9 ರೊಂದಿಗೆ ಓದಿಕೊಳ್ಳಬೇಕಾದ ಸೆಕ್ಯುರೈಟೆಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಸರ್ಫೇಸಿ ಕಾಯಿದೆ), 2002 ರಡಿ ಆಸ್ತಿಗಳ ಇ-ಹರಾಜು ಮಾರಾಟಕ್ಕಾಗಿ ಸಾರ್ವಜನಿಕ ಸೂಚನೆ

ಆದಾಗ್ಯೂ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸರ್ಫೇಸಿ ಕಾಯಿದೆಯ ಕಲಂ 13(4)ರಡಿ ಕೆಳಕಂಡ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಮಾಹಿತಿ ನೀಡುವುದೇನೆಂದರೆ ಸಾಲ ಪಡೆಯಲು ಸಾಲಗಾರರು ಅಡಮಾನ ಮಾಡಿರುವ ಆಸ್ತಿಗಳನ್ನು ಬ್ಯಾಂಕಿಗೆ ಬಾಕಿಯಾಗಿರುವ ಸಾಲಗಳ ವಸೂಲಾತಿಗಾಗಿ ''ಎಲ್ಲಿ ಹೇಗಿದೆಯೋ ಹಾಗೆಯೇ'' ಹಾಗೂ ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ ಸರ್ಫೇಸಿ ಕಾಯಿದೆಯಂತೆ ಇ-ಹರಾಜು ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಸಾಲದ ಖಾತಾ ಸಂಖ್ಯೆ	ಮೂಲ ಸಾಲಗಾರ/ ಸಹ-ಸಾಲಗಾರ/ ಜಾಮೀನುದಾರ/ಹೆಸರು	13-2 ನೋಟೀಸ್ ದಿನಾಂಕ	ಸ್ವಾಧೀನತೆಯ ದಿನಾಂಕ	ಪ್ರಸ್ತುತ ಬಾಕಿ ಮೊತ್ತ ದಿನಾಂಕ 29.06.2023 ರಂದು ಇದ್ದಂತೆ	ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ	ಮೀಸಲು ಬೆಲೆ ಐಎನ್‌ಆರ್	ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಂಡಿ) ಐಎನ್‌ಆರ್	ಇ-ಹರಾಜಿನ ದಿನಾಂಕ ಮತ್ತು ಸಮಯ	ಬಿಡ್ ಸಲ್ಲಿಸಲು ಸ್ಥಳ ಮತ್ತು ಕೊನೆಯ ದಿನಾಂಕ ಮತ್ತು ಸಮಯ
1	45469440000070	1) ಪ್ರತಾಪ್ ಸಿಡಿ ಮಾಲೀಕರು: ಟೈಲ್ಸ್ ಬಿಸಿನೆಸ್ (ಸಾಲಗಾರರು), 2) ದಯಾನಂದ ಭಗವಾನ್ ಸಿ ಜಿ. (ಜಾಮೀನುದಾರರು) 3) ತೇಜವತಿ ಟಿ ಎಲ್ (ಜಾಮೀನುದಾರರು) 4) ಪ್ರದೀಪ್ ಸಿಡಿ (ಜಾಮೀನುದಾರರು)	12-10-2022	25-04-2023	ರೂ. 4,18,038/- (ನಾಲ್ಕು ಲಕ್ಷದ ಹದಿನೆಂಟು ಸಾವಿರದ ಮೂವತ್ತೆಂಟು ರೂ.ಗಳು ಮಾತ್ರ)	12.07.2023 ಬೆಳಗ್ಗೆ 9:30 ರಿಂದ ಸಂಜೆ 05.00 ವರೆಗೆ	ರೂ. 10,37,000/- (ಹತ್ತು ಲಕ್ಷದ ಮೂವತ್ತೇಳು ಸಾವಿರ ರೂ. ಗಳು ಮಾತ್ರ)	ರೂ. 1,03,700/- (ಒಂದು ಲಕ್ಷದ ಮೂರು ಸಾವಿರದ ಏಳುನೂರು ರೂ.ಗಳು ಮಾತ್ರ)	21.07.2023 ರಂದು ಮಧ್ಯಾಹ್ನ 02:00	20.07.2023, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಮುಖ್ಯ ಕಛೇರಿ: ದಿ ಫೇರ್‌ವೇ, ನೆಲಮಹಡಿ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2, ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಒಳವರ್ತುಲ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071.

ಭದ್ರತಾ ಆಸ್ತಿಯ ವಿವರಣೆ : ಸಕಲ ಸಮಸ್ತವೂ ಸೇರಿದ ಷೆಡ್ಯೂಲ್ ಆಸ್ತಿಯ ವಸತಿ ಕಟ್ಟಡದ ಮಹಾನಗರಪಾಲಿಕೆ ಖಾತಾ ಸಂ. 2792 (ಸರ್ವೆ ಸಂ. 318ರಲ್ಲಿರುವ ಆಸ್ತಿ) ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 12 ಅಡಿ, ವಾರ್ಡ್ ಸಂ. 21, ಗುರು ಬಡಾವಣೆ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ- ಉಳಿಕೆ ಆಸ್ತಿ, ಪಶ್ಚಿಮಕ್ಕೆ- ಇತರರ ನಿವೇಶನ, ಉತ್ತರಕ್ಕೆ- ಪಾರ್ಕ್, ದಕ್ಷಿಣಕ್ಕೆ- ರಸ್ತೆ. ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 12 ಅಡಿ, ಒಟ್ಟಾರೆ ಅಳತೆ: 360 ಚದರ ಅಡಿ.

ಆಸ್ತಿಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಮಾರಾಟ ಮಾಡಲಾಗುವುದು. ಇ-ಹರಾಜನ್ನು 'ಆನ್ ಲೈನ್' ಮೂಲಕ ನಡೆಸಲಾಗುತ್ತದೆ. ಹರಾಜನ್ನು ಬ್ಯಾಂಕ್ ಅಂಗೀಕೃತ ಸೇವಾ ಒದಗಿಸುವವರಾದ ಮೆ॥-4 ಕ್ಲೋಸರ್ ಮೂಲಕ https://bankauctions.in & www.foreclosureindia.com ಎಂಬುವ ವೆಬ್‌ಪೋರ್ಟಲ್‌ನಲ್ಲಿ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮತ್ತು ವಿವರಗಳಿಗಾಗಿ, ನೆರವಿಗಾಗಿ, ಕ್ರಮಗಳ ತಿಳಿದುಕೊಳ್ಳುವುದಕ್ಕಾಗಿ ಮತ್ತು ಇ-ಹರಾಜು ಆನ್‌ಲೈನ್ ತರಬೇತಿ ಪಡೆದುಕೊಳ್ಳುವುದಕ್ಕಾಗಿ ಭಾವಿ ಬಿಡ್‌ದಾರರು ಮೆ॥-4 ಕ್ಲೋಸರ್ ಸಂಪರ್ಕಿಸಿ ಶ್ರೀ ಭಾಸ್ಕರ್ ನಾಯ್ಡ್ ಸಂಪರ್ಕ ಸಂ. 8142000809/ 8142000061. Email id: info@bankauctions.in / subbarao@bankauctions.in.ಇವರನ್ನು ಸಂಪರ್ಕಿಸುವುದು.

ಷರತ್ತು ಮತ್ತು ನಿಬಂಧನೆಗಳ ಹೆಚ್ಚಿನ ವಿವರಗಳಿಗಾಗಿ ಹಾಗೂ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕಾಗಿ ಹಾಗೂ ಆಸ್ತಿ ಸಂಬಂಧಿತ ಯಾವುದೇ ವಿವರಗಳಿಗಾಗಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅಧೀಕೃತ ಅಧಿಕಾರಿಗಳಾದ ಶ್ರೀ ರಂಜನ್ ನಾಯಕ್, (9590858249) ಮತ್ತು ಶ್ರೀ ಬಿ ಶ್ರೀಜಿತ್ (9916827135)/ ಅನ್ನು ಸಂಪರ್ಕಿಸುವುದು. ಅಧಿಕೃತ ಅಧಿಕಾರಿಗಳ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗೆ ಬಂದಂತೆ ಆಸ್ತಿಗಳ ಮೇಲೆ ಯಾವುದೇ ಋಣಭಾದ್ಯತೆಗಳು ಇಲ್ಲ. ಆದಾಗ್ಯೂ, ಇಚ್ಛೆಯುಳ್ಳ ಬಿಡ್‌ದಾರರು ಬಿಡ್ ಸಲ್ಲಿಸುವ ಮುಂಚೆ ಆಸ್ತಿಯ ಋಣಭಾದ್ಯತೆಗಳು ಹಾಗೂ ಸ್ವಾಮ್ಯ ಮುಂತಾದವುಗಳ ಬಗ್ಗೆ ಅವರದೇ ಸ್ವತಂತ್ರ ವಿಚಾರಣೆಗಳನ್ನು ನಡೆಸಿ ತಿಳಿದುಕೊಳ್ಳಬಹುದಾಗಿದೆ. ಷರತ್ತಿನ ಬಿಡ್‌ಗಳನ್ನು ಒಪ್ಪಿಕೊಳ್ಳುವುದಿಲ್ಲ. ಮೇಲೆ ಹೆಸರಿಸಲಾದ ಸಾಲಗಾರರು/ ಜಾಮೀನುದಾರರು/ ಅಡಮಾನದಾರರುಗಳಿಗೆ ಈ ಮೂಲಕ ಅಧಿಸೂಚಿಸುವುದೇನೆಂದರೆ ಮೇಲೆ ತಿಳಿಸಿದ ಬಾಕಿ ಮೊತ್ತ ಜೊತೆಗೆ ಅಪ್ ಟು ಡೇಟ್ ಬಡ್ಡಿ ಹಾಗೂ ಸಾದಿಲ್ವಾರು ವೆಚ್ಚಗಳನ್ನು ಹರಾಜಿನ ದಿನಾಂಕಕ್ಕೆ ಮುಂಚೆ ಪಾವತಿ ಮಾಡಬೇಕು. ವಿಫಲರಾದಲ್ಲಿ ಮೇಲಿನ ಆಸ್ತಿಯನ್ನು ಮಾರಾಟ ಮಾಡಿ ಸಾಲದ ಬಾಕಿಗಾಗಿ ಹೊಂದಿಸಿಕೊಳ್ಳಲಾಗುವುದು. ಇನ್ನೂ ಬಾಕಿ ಉಳಿದ ಪಕ್ಷದಲ್ಲಿ ಅದನ್ನು ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲು ಮಾಡಿಕೊಳ್ಳಲಾಗುವುದು.

ದಿನಾಂಕ: 05.07.2023, ಸ್ಥಳ: ತುಮಕೂರು
ಸಹಿ/- ಅಧಿಕೃತ ಅಧಿಕಾರಿ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್